ವಿಜಯ ಕರ್ನಾಟಕ

**Monday, 11th July 2011**

ಹೊಸ ಕೋರ್ಸ್

# ಫೋರೆನ್ಸಿಕ್ ಸೈನ್ಸ್



ಅಪರಾಧಗಳ ಸಂದರ್ಭದಲ್ಲಿ ಕಾನೂನು ಮತ್ತು ಅದರ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿ ತರುವಲ್ಲಿ ನೆರವಿಗೆ ಬರುವ ವಿಜ್ಞಾನದ ಇನ್ನೊಂದು ರೂಪವೇ ಫೋರೆನ್ಸಿಕ್ ಸೈನ್ಸ್

ಅಪರಾಧಗಳ ಸಂದರ್ಭದಲ್ಲಿ ಕಾನೂನು ಮತ್ತು ಅದರ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿ ತರುವಲ್ಲಿ ನೆರವಿಗೆ ಬರುವ ವಿಜ್ಞಾನದ ಇನ್ನೊಂದು ರೂಪವೇ ಫೋರೆನ್ಸಿಕ್ ಸೈನ್ಸ್. ತನಿಖೆ ಮತ್ತು ಸಾಕ್ಷಿಯ ವಿಶ್ಲೇಷಣೆಯಲ್ಲಿ ವೈಜ್ಞಾನಿಕವಾದ ತರ್ಕಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ಈ ಕೋರ್ಸ್‌ನಲ್ಲಿ ನೀಡಲಾಗುತ್ತದೆ.

ಫೋರೆನ್ಸಿಕ್ ಉಪಯೋಗಕ್ಕೆ ಸಂಬಂಧಿಸಿದಂತೆ ಬೌದ್ಧಿಕ ಸವಾಲಿನ ಅಧ್ಯಯನವನ್ನು ಈ ಕೋರ್ಸ್‌ನಲ್ಲಿ ಅಳವಡಿಸಲಾಗಿದ್ದು, ಫೋರೆನ್ಸಿಕ್ ಸೈನ್ಸ್ ಮತ್ತು ಇತರೆ ವೈಜ್ಞಾನಿಕ ವಿಷಯಗಳ ಅಧ್ಯಯನ ಮೂಲಕ ವಿದ್ಯಾರ್ಥಿಗಳನ್ನು ಉತ್ತೇಜಿಸುವುದು ಇದರ ಮುಖ್ಯ ಗುರಿ. ಉನ್ನತ ಗುಣಮಟ್ಟದ ಸ್ಥೂಲ ವೈಜ್ಞಾನಿಕ ತರಬೇತಿಯನ್ನು ನೀಡುವುದರ ಮೂಲಕ, ಪದವೀಧರರು ಅತ್ಯುತ್ತಮ ಉದ್ಯೋಗಾವಕಾಶಗಳನ್ನು ಗಳಿಸಲು ಈ ಕೋರ್ಸ್ ಸಹಕಾರಿಯಾಗಿದೆ.

ಪ್ರಕರಣ ದೃಶ್ಯ ತನಿಖೆ, ಭೌತಿಕ ಸಾಕ್ಷಿ ಸಂಗ್ರಹಣೆ, ಸಾಕ್ಷಿಯ ಪ್ರಾಯೋಗಿಕ ವಿಶ್ಲೇಷಣೆ ಮತ್ತು ಪುರಾವೆಯ ರಕ್ಷಣೆಯನ್ನೊಳಗೊಂಡ ತನಿಖಾರಂಗ ಮತ್ತು ಕಾನೂನಿನ ಪರಿಣಾಮಕಾರಿ ಜಾರಿಗೆ ಬೇಕಾದ ತಜ್ಞರ ಬೇಡಿಕೆಗಳನ್ನು ಈ ಕೋರ್ಸ್ ಪೂರೈಸುತ್ತದೆ.

ಫೋರೆನ್ಸಿಕ್ ಸೈನ್ಸ್‌ನಲ್ಲಿ 3 ವಿಧಾನಗಳಿದ್ದು, ಅದನ್ನು ಮೆಡಿಕಲ್, ಲ್ಯಾಬೋರೇಟರಿ ಮತ್ತು ಫೀಲ್ಡ್ ಸೈನ್ಸ್ ಎಂದು ವಿಂಗಡಿಸಲಾಗಿದೆ. ಫೋರೆನ್ಸಿಕ್ ಮೆಡಿಸಿನ್ ಕೋರ್ಸ್, ಫೋರೆನ್ಸಿಕ್ ಪಾಥೋಲಜಿ, ಸೈಕ್ಯಾಟ್ರಿ, ಸೈಕಾಲಜಿ, ಫೋರೆನ್ಸಿಕ್ ಮೆಡಿಸಿನ್ ಮತ್ತು ಒಡೊನ್ಟಾಲಜಿ (ಡೆನ್ಟಿಸ್ಟ್ರಿ) ವಿಷಯಗಳನ್ನು ಒಳಗೊಂಡಿದೆ.

ಲ್ಯಾಬೊರೇಟರಿ ಸೈನ್ಸ್, ಕೆಮಿಸ್ಟ್ರಿ, ಬಯೋಲಜಿ, ಟಾಕ್ಸಿಕೋಲಜಿ, ಬಾಲಿಸ್ಟಿಕ್ಸ್, ಫಿಂಗರ್ ಪ್ರಿಂಟ್ಸ್, ಪ್ರಶ್ನಾರ್ಹ ಕಾಗದ ಮತ್ತು ಗುರುತುಗಳನ್ನೊಳಗೊಂಡ ವಿಷಯವಾಗಿದೆ. ಇನ್ನು ಫೀಲ್ಡ್ ಸೈನ್ಸ್, ಬೆಂಕಿ ಮತ್ತು ಸ್ಫೋಟಕ ದೃಶ್ಯ ಹಾಗೂ ರಹಸ್ಯ ಡ್ರಗ್ ಲ್ಯಾಬೋರೇಟರಿಗಳಿಗೆ ಸಂಬಂಧಿಸಿದ ಅಪರಾಧಗಳ ತನಿಖೆಯನ್ನೊಳಗೊಂಡಿದೆ.

**ಅವಧಿ:**

3 ವರ್ಷ, 6 ಸೆಮಿಸ್ಟರ್‌ಗಳು

**ಅರ್ಹತೆ:**

ಪಿಯುಸಿ/ ಸಿಬಿಎಸ್‌ಇ/ ಐಎಸ್‌ಸಿ/ಸಮಾನ ವಿದ್ಯಾರ್ಹತೆ.

ಅಭ್ಯರ್ಥಿಯು ಭೌತಶಾಸ್ತ್ರ ರಸಾಯನ ಶಾಸ್ತ್ರ ಜೀವಶಾಸ್ತ್ರವನ್ನು ಈ ಮೇಲ್ಕಂಡ ವಿದ್ಯಾಭ್ಯಾಸದಲ್ಲಿ ಅಧ್ಯಯನ ಮಾಡಿರಬೇಕು.

**ಉದ್ಯೋಗಾವಕಾಶ:**

ಫೋರೆನ್ಸಿಕ್ ಸೈನ್‌ನಲ್ಲಿ ಪದವಿ ಪಡೆದವರು, ವಿಷಯಗಳನ್ನು ವಿಶ್ಲೇಷಿಸುವ ಮತ್ತು ಸಮಸ್ಯೆಗಳನ್ನು ಬಗೆಹರಿಸುವ ನೈಪುಣ್ಯತೆಯನ್ನು ಮೈಗೂಡಿಸಿಕೊಂಡಿರುತ್ತಾರೆ. ಇದು, ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಅವರಿಗೆ ವ್ಯಾಪಕ ಉದ್ಯೋಗಾವಕಾಶವನ್ನು ಕಲ್ಪಿಸುತ್ತದೆ. ಇದರ ಜೊತೆಗೆ, ಕಾನೂನು ಜಾರಿ ಸಂಸ್ಥೆ (ಪೋಲಿಸ್, ಆರೋಗ್ಯ, ವಾತಾವರಣ) ಮತ್ತು ತನಿಖಾ ಸಂಸ್ಥೆಗಳಲ್ಲಿ ಫೋರೆನ್ಸಿಕ್ ಸೈನ್ಸ್‌ನಲ್ಲಿ ಕೆಲಸ ಮಾಡಿದ ನಿಷ್ಣಾತರಿಗೆ ಹೆಚ್ಚಿನ ಬೇಡಿಕೆ ಇದೆ.

**ಹೆಚ್ಚಿನ ಮಾಹಿತಿಗಾಗಿ:** ಜೈನ್ ವಿಶ್ವವಿದ್ಯಾಲಯ ಅಡ್ಮಿಶನ್ ಆಫೀಸ್, 91/2 ಎ.ಎನ್.ಕೃಷ್ಣರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು-560 004, ದೂರವಾಣಿ ಸಂಖ್ಯೆ-4343 1000 / 2661 5246.